ಶ್ರೀ ಎಸ್. ಆರ್. ಕಂಠಿ.—ಅನ್ಯಾಯವಾದದ್ದು ಗಮನಕ್ಕೆ ತಂದರೆ ವಿಚಾರಿಸುತ್ತೇವೆ.

SRI SANJEEVANATH AIKALA.—May I know whether any local candidates are working in the Education Department, if so, how many and what is their present position ?

ಶ್ರೀ ಎಸ್. ಆರ್. ಕಂಠಿ.—ಸಾಮಾನ್ಯವಾಗಿ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ವಿದ್ಯಾಭ್ಯಾಸ ಇಲಾಖೆಯಲ್ಲಿ ತೆಗೆದುಕೊಳ್ಳ ಬೇಕಾಗುತ್ತದೆ. ಅದಿಲ್ಲದೆ ಆಲ್ಲಿನ ಕೆಲಸ ನಡೆಯುವುದಕ್ಕೇ ಆಗುವುದಿಲ್ಲ. ವರ್ಷೇ ವರ್ಷೇ ಎಷ್ಟೋ ವಿದ್ಯಾರ್ಥಿಗಳು ಪಾಸಾಗಿ ಬರುತ್ತಲೇ ಇರುತ್ತಾರೆ. ಆವರನ್ನೆಲ್ಲಾ ಕೂಡಲೇ ರೆಕ್ರೂಟ್ ಮಾಡು: ವುದಕ್ಕಾಗುವುದಿಲ್ಲ. ಆದಕ್ಕೊಸ್ಕರ ಆ ವಿಚಾರವನ್ನು ಸ್ವಲ್ಪ ನಿದಾನವಾಗಿ ತೆಗೆದುಕೊಳ್ಳಬೇಕಾಗುತ್ತದೆ.

Lands brought under Forest Cultivation.

*.*Q.*—66. SRI S. RAJAGOPAL (K. G. F.).—

Will the Government be pleased to state :—

(*a*) the total acre of lands brought under forest cultivation in Kolar District during the last three years ;

(*b*) the revenue and the Expenditure in this behalf ?

A.—SRI B. RACHAIAH (Minister for Forests and Fisheries).—

(*a*) 16,542.

(*b*) Revenue—Nil, expenditure—Rs. 14,56,028.

SRI S. RAJAGOPAL.—May I know the total acreage of land brought under forest cultivation in the district talukwise ?

† SRI B. RACHAIAH.—It is not immediately available ; I want notice.

MR. SPEAKER.—It can be furnished to the Hon'ble member later on.

SRI S. RAJAGOPAL.—May I know the total number of staff provided to look after this forest area ?

SRI B. RACHAIAH.—Sufficient staff has been provided.

SRI S. RAJAGOPAL.—Is it not a fact that sufficient staff has not been provided to look after this forest area ?

SRI B. RACHAIAH.—I do not know what is meant by sufficient number. According to me, enough staff has already been posted to look after these plantations. If more staff is required, it can be given.

ಶ್ರೀ ಕೆ. ಲಕ್ಕಪ್ಪ.—(ಆ) ಪ್ರಶ್ನೆಗೆ ಉತ್ತರವಾಗಿ 14 ಲಕ್ಷ ಚಿಲ್ಲರೆ ರೂಪಾಯಿಗಳನ್ನು ವೆಚ್ಚ ಮಾಡಿದ್ದರೂ ಆದಾಯವೇನೂ ಇಲ್ಲವೆಂದು ಹೇಳಿದೆ. ಇದಕ್ಕೆ ಕಾರಣ ಅರಣ್ಯ ಇಲಾಖೆ ಬಹಳ ಬೇಜವಾಬ್ದಾರಿಯಿಂದ ವರ್ತನೆಮಾಡುತ್ತಿರುವುದು ಹಾಗೂ ಇದರಲ್ಲಿರತಕ್ಕ ಇನ್‌ಎಫಿಷಿಯನ್ಸಿ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

SRI B. RACHAIAH.—I repudiate the insinuation.

SRI S. RAJAGOPAL.—Is there any land left out which has not been brought under this cultivation, which belongs to the Forest Department ?

SRI B. RACHAIAH.—The Taluk Level Committee wanted to transfer about 19,700 acres to be planted in Kolar District, and it is in the process of transfer. After it is completely transferred, we will take necessary action.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಕಳೆದ ಮೂರು ವರ್ಷಗಳಿಂದಲೂ ಕೋಲಾರ ಜಿಲ್ಲೆಯಿಂದ ಅರಣ್ಯ ಇಲಾಖೆಗೆ ಏನೂ ಆದಾಯವೂ ಬರಲಿಲ್ಲವೇ ?

ಶ್ರೀ ಬಿ. ರಾಚಯ್ಯ.—ಮೂರು ವರ್ಷಗಳಲ್ಲಿ ಬ್ಯಾರನ್ ಲ್ಯಾಂಡ್ಸಿನಲ್ಲಿ ಸರ್ಕಾರದವರು ಎಲ್ಲೆಲ್ಲಿ ಸಸಿಗಳನ್ನು ಹಾಕಿದ್ದಾರೆಂಬುದಾಗಿ ಮಾನ್ಯ ಸದಸ್ಯರು ಕೇಳಿದ್ದರು. ಅದಕ್ಕೋಸ್ಕರ ಉತ್ತರದಲ್ಲಿ 16,542 ಎಕರೆಗಳಷ್ಟು ಜಮೀನನ್ನು ಅಫಾರೆಸ್ಟೇಷನ್ ಮಾಡಲಾಗಿದೆಯೆಂದು ಹೇಳಿದೆ. ಇನ್ನು ಕೆಲವು ಕಡೆಗಳಲ್ಲಿ ಇಕನಾಮಿಕ್ ಪ್ಲಾಂಟುಗಳನ್ನು ಹಾಕಿರುವುದರಿಂದ ಅವುಗಳಿಂದ 10—16 ವರ್ಷಗಳ ಮೇಲೆ ಈಲ್ಡ್ ಬರುತ್ತದೆ. ಬೆಳೆಯದೇ ಇರತಕ್ಕ ಭೂಮಿಯಲ್ಲಿಯೂ ಕೆಲವು ಗಿಡಗಳನ್ನು ಸರ್ಕಾರದವರು ಹಾಕಿದ್ದಾರೆಂದು ಹೇಳಿದರೆ ಮಾನ್ಯ ಸದಸ್ಯರು ಸಂತೋಷಪಡಬೇಕು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕಾಡನ್ನು ಬೆಳೆಸುವ ದೃಷ್ಟಿಯಲ್ಲಿ ಸುಮಾರು 8—10 ವರ್ಷಗಳಿಂದಲೂ ಸರ್ಕಾರದವರು ರೆವಿನ್ಯೂ ಲ್ಯಾಂಡನ್ನು ರೈತರಿಗೆ ಕೊಡುತ್ತಲೇ ಇದ್ದಾರೆ. ಕಾಡಿನ ಸಂಪತ್ತನ್ನು ಬೆಳೆಸುವ ಬಗ್ಗೆ ವಿಚಾರಮಾಡಲು ನಮ್ಮ ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ಆ ಸಮಿತಿಗೆ ನಮ್ಮ ಜಿಲ್ಲೆಯಿಂದ ಈ ಬಗ್ಗೆ ಅರ್ಜಿಗಳನ್ನು ಕಳುಹಿಸಿದ್ದರೆ ಅವನ್ನು ಸಮಿತಿಯವರು ಗಮನದಲ್ಲಿಟ್ಟುಕೊಂಡು ಏನಾದರೂ ಅಂತ್ಯ ತೀರ್ಮಾನಮಾಡಿ ಯಾವುದಾದರೂ ಶಿಫಾರ್ಸುಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ಆ ತಾಲ್ಲೂಕು ಸಮಿತಿಯವರು 19,700 ಎಕರೆಗಳಷ್ಟು ಜಮೀನನ್ನು ಅಫಾರೆಸ್ಟೇಷನ್ ಮಾಡಬೇಕೆಂದು ಅರಣ್ಯ ಇಲಾಖೆಗೆ ವರ್ಗಾಯಿಸುವ ಬಗ್ಗೆ ಅವರ ಶಿಫಾರ್ಸುಗಳನ್ನು ಕಳುಹಿಸಿದ್ದಾರೆ.

ಶ್ರೀ ಎಸ್. ಗೋಪಾಲ ಗೌಡ.—ಕೋಲಾರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ 16 ಸಾವಿರ ಚಿಲ್ಲರೆ ಎಕರೆಗಳಷ್ಟು ಜಮೀನಿನಲ್ಲಿ 14 ಲಕ್ಷ ಚಿಲ್ಲರೆ ರೂಪಾಯಿಗಳ ವೆಚ್ಚದಲ್ಲಿ ಅರಣ್ಯ ಇಲಾಖೆಯವರು ನೆಟ್ಟಿರತಕ್ಕ ಗಿಡಗಳು ಯಾವುವು ?

ಶ್ರೀ ಬಿ. ರಾಚಯ್ಯ.—ಹೆಚ್ಚಿಗೆ ಯೂಕಲಿಪ್ಟಸ್ ಗಿಡಗಳೇ. ಕೋಲಾರ ಜಿಲ್ಲೆಯಲ್ಲಿ ಹುಣಸೆ, ಬೇವು, ತಂಗಡಿ ಮತ್ತು ಹೊಂಗೆ—ಇತ್ಯಾದಿ ಕಾಡು ಜಾತಿಯ ಸಂಬಂಧವಾದುವುಗಳನ್ನು ಜಾಸ್ತಿ ಹಾಕಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಈಗ 16 ಸಾವಿರ ಚಿಲ್ಲರೆ ಎಕರೆಗಳಷ್ಟು ಜಮೀನಿನಲ್ಲಿ ಕಾಡನ್ನು ಬೆಳೆಸಬೇಕಾಗಿದ್ದರೆ 14 ಲಕ್ಷ ಚಿಲ್ಲರೆ ರೂಪಾಯಿಗಳನ್ನು ವೆಚ್ಚಮಾಡಿದ್ದಾರೆಂದು ಉತ್ತರದಲ್ಲಿ ಹೇಳಿದೆ. ಅಂದಮೇಲೆ ಈ 14 ಲಕ್ಷ ಚಿಲ್ಲರೆ ರೂಪಾಯಿಗಳಲ್ಲಿ ಸಿಬ್ಬಂದಿ ಖರ್ಚಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ?

ಶ್ರೀ ಬಿ. ರಾಚಯ್ಯ.—ಹಣವನ್ನು ಇದಕ್ಕೆ ಪ್ರತ್ಯೇಕವಾಗಿ ನಮ್ಮ ಅರಣ್ಯ ಇಲಾಖೆಯಲ್ಲಿ ಒದಗಿಸಿಲ್ಲ ಇರತಕ್ಕ ಅಧಿಕಾರಿಗಳೇ ಇದನ್ನೂಕೂಡ ನೋಡಿಕೊಂಡು ಹೋಗುತ್ತಿದ್ದಾರೆ. ಇದಕ್ಕಾಗಿ ಪ್ರತ್ಯೇಕವಾಗಿ ಹೆಚ್ಚಿಗೆ ಹಣವನ್ನು ವ್ಯಯಮಾಡಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ 14 ಲಕ್ಷ ಚಿಲ್ಲರೆ ಹಣವನ್ನು ಖರ್ಚುಮಾಡಿದೆ ಎಂದು ಹೇಳಿದೆ. ಹೀಗೆ ಖರ್ಚುಮಾಡಿರತಕ್ಕ ಹಣ 10 ವರ್ಷಗಳಾದಮೇಲೆ ಇವರಿಗೆ ವಾಪಸ್ಸು ಬರುವುದಕ್ಕೆ ಸಾಧ್ಯವೇ ?- ಹಾಗಿರತಕ್ಕ ಸಸಿಗಳಲ್ಲಿ ಈಗ ಎಷ್ಟು ಪರ್ಸೆಂಟೇಜ್ ಉಳಿದಿವೆ ? ಎಷ್ಟು ಎಕರೆಗಳಲ್ಲಿ ಬಂಗಾರ ಬಿಡತಕ್ಕ ಗಿಡಗಳನ್ನೇನಾದರೂ ಹಾಕಿದ್ದಾರೆಯೇ ? ಏಕೆಂದರೆ ಶ್ರೀ ರಾಚಯ್ಯನವರು ಕಾಡು 'ಪ್ರದೇಶದಿಂದ ಬಂದಿರುವವರು. ಅದಕ್ಕೋಸ್ಕರವೇ ಅರಣ್ಯ ಸಂಪತ್ತು ಚೆನ್ನಾಗಿ ಬೆಳೆಯುತ್ತಾ ಇದೆ. ಆದರೆ ಇಷ್ಟು ಹಣ ಈಗ ಖರ್ಚುಮಾಡಿರುವಾಗ ಒಂದುವೇಳೆ ಆ ಹಣ ವಾಪಸ್ಸು ಬಾರದೇ ಹೋದರೆ ಅದಕ್ಕೆ ಯಾರು ಜವಾಬ್ದಾರರು ?

MR. SPEAKER.—It is disallowed.

ಶ್ರೀ ಎಸ್. ಗೊಪಾಲ ಗೌಡ.—ಕೋಲಾರ ಜಿಲ್ಲೆಯ ಮಾಲೂರು ಮತ್ತು ಇತರೇ ತಾಲ್ಲೂಕುಗಳಲ್ಲಿ ಹೆಚ್ಚಿಗೆ ಕ್ಯಾಷುರೀನ ಮರಗಳನ್ನು ನೆಡುವುದರಿಂದ ಅವನ್ನು ಉಳುಮೆ ಮಾಡುವ ಜಮೀನುಗಳ ಪಕ್ಕದಲ್ಲಿ ಬೆಳೆಸುವುದರಿಂದ ಉಳುಮೆ ಮಾಡತಕ್ಕ ಜಮೀನುಗಳಿಗೆ ನೀರು ಕಡಿಮೆಯಾಗಿ ಬರುತ್ತಿದೆಯೆಂದು ಮನವಿಗಳು ಅಲ್ಲಿನ ರೈತರಿಂದ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ರಾಚಯ್ಯ.—ಉಳುಮೆ ಮಾಡತಕ್ಕ ಜನಗಳಿಗೆ ಅಫಾರೆಸ್ಟೇಷನ್ ಮಾಡುವುದರಿಂದ ಹೆಚ್ಚು ನೀರಿನ ಕನ್‌ಸಮ್‌ಷನ್ ಆಗುತ್ತದೆ ಮತ್ತು ನೀರು ಸಾಕಷ್ಟು ಸಿಗುವುದಿಲ್ಲವೆಂದು ಯಾವ ಅರ್ಜಿಗಳೂ ಬಂದಿಲ್ಲ.

ಶ್ರೀ ಎ. ಜಿ. ದೊಡ್ಡಮೇಟಿ.—ಈಗ ಇಲ್ಲಿ ಆಗಿರತಕ್ಕ 14 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಯಾವುದಾದರೂ ಒಂದು ಐಟಂಗೆ ಎಷ್ಟು ಸಾಮಾನ್ಯವಾಗಿ ಖರ್ಚಾಗುತ್ತದೆಯೆಂದು ರಫ್ ಆಗಿ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಬಿ. ರಾಚಯ್ಯ.—ಸಾಮಾನ್ಯವಾಗಿ ಒಂದು ಎಕರೆಗೆ 150 ರೂಪಾಯಿಗಳಂತೆ ಸಸಿಗಳನ್ನು ಬೆಳೆಸುವುದರಿಂದ ಹಿಡಿದು ಅವುಗಳನ್ನು ಪ್ಲಾಂಟ್ ಮಾಡುವವರೆಗೂ ಖರ್ಚಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಜ್ಯಾದ್ಯಂತ ಕೆಲವು ಕಡೆಗಳಲ್ಲಿ ನೀಲಗಿರಿ ಗಿಡವನ್ನೂ ಕೂಡ ಹಾಕಿದ್ದಾರೆ. ಇವರು ಇನ್ನೂ ಟೀಕ್ ಮತ್ತು ಹೊನ್ನೆ ಮರಗಳನ್ನು ಹಾಕಲಿಕ್ಕೆ ಪ್ರಯತ್ನ ಮಾಡಲಿಲ್ಲ. ಕೋಲಾರ ಜಿಲ್ಲೆಯಲ್ಲಿ ಟೀಕ್, ಹೊನ್ನೆ ಮತ್ತು ಕರೀಮರಗಳನ್ನು ಬೆಳೆಸುವುದಕ್ಕೆ ಅವಕಾಶವಿದೆಯಲ್ಲವೇ ?

ಶ್ರೀ ಬಿ. ರಾಚಯ್ಯ.—ಎಲ್ಲಾ ಜಾಗಗಳಲ್ಲಿಯೂ ಆ ರೀತಿ ಬೆಳೆಯುವುದಕ್ಕಾಗುವುದಿಲ್ಲ. ಅದು ಸಾಧ್ಯವೂ ಇಲ್ಲ. ಹುಣಿಸೆ ಮತ್ತು ಕ್ಯಾಷುರೀನ ಮರಗಳನ್ನು ಅಲ್ಲಿ ಬೆಳೆಯುತ್ತಾರೆ. ಯಾವ್ಯಾವ ಜಾಗದಲ್ಲಿ ಯಾವ್ಯಾವ ಮರಗಳನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಸಾಧ್ಯವೋ ಅಲ್ಲಲ್ಲಿ ಆಯಾ ಮರಗಳನ್ನು ಬೆಳೆಯುತ್ತಾರೆ. ಟೀಕ್ ಮರವನ್ನು ಬ್ಯಾರನ್ ಪ್ರದೇಶದಲ್ಲಿಯೂ ಬೆಳೆಯುತ್ತಾರೆ.

ಶ್ರೀ ಅಂದಾನಯ್ಯ.—ಕಾಡು ಬೆಳೆಸುವುದು ಸರ್ಕಾರ ಹಣ ಗಳಿಸುವ ಉದ್ದೇಶವೇ ?

ಶ್ರೀ ಬಿ. ರಾಚಯ್ಯ.—ಮರಗಳನ್ನು ಬೆಳೆಸುವುದು ಸಾಯಲ್ ಕನ್‌ಸರ್‌ವೇಷನ್ ಮತ್ತು ನೀರು ಕೋಡಿ ಹೋಗದೇ ಇರುವ ಉದ್ದೇಶದಿಂದ. ಹಣವನ್ನು ಸರ್ಜಾರ ಗಳಿಸುವ ಉದ್ದೇಶವೇನೂ ಇಲ್ಲ. ಆಲ್ಲದೆ ಸುಮ್ಮನೆ ಹಣವನ್ನು ಸರ್ಕಾರ ಖರ್ಚುಮಾಡುವುದೇನೂ ಇಲ್ಲ. ಅಷ್ಟು ಸುಲಭವಾಗಿ ಈ ಅಸೆಂಬ್ಲಿಯಲ್ಲಿ ಮುಂಜೂರುಮಾಡುವುದಿಲ್ಲ.

Collection of National Defence Fund.

*Q.—89. SRI VEERABHADRAPPA ERAPPA (Yelburga).—

Will the Government be pleased to state :—

(*a*) whether it has come to their notice that Tahsildars of Koppal and Yelburga Taluks in Raichur District had entrusted the collection work of the National Defence Fund to the Village Officers ;

(*b*) the number of Village Officers who have submitted accounts of the collection made by them to the concerned Taluk Office ;

(*c*) whether any complaints have been received by them to the effect that certain Village Officers have not yet given their proper accounts in this behalf ?

A.—SRI VEERENDRA PATIL (Minister for Public Works) [on behalf of SRI S. NIJALINGAPPA (Chief Minister)].—

(*a*) Yes.

(*b*) (i) In Yelburga Taluk all Village Officers have rendered accounts.

(ii) In Koppal Taluk 146 Village Officers have rendered accounts.

(*c*) One such complaint was received from Koppal Taluk and the matter is under enquiry.

ಶ್ರೀ ವೀರಭದ್ರಪ್ಪ ಈರಪ್ಪ.—ಯಾವ್ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಹಣ ವಸೂಲುಮಾಡಲಾಗಿದೆ ?

†ಶ್ರೀ ವೀರೇಂದ್ರ ಪಾಟೀಲ್.—ಎಷ್ಟು ಹಣ ವಸೂಲು ಮಾಡಿದ್ದಾರೆಂಬ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಅದಕ್ಕೆ ನೋಟೀಸ್ ಬೇಕು.

ಶ್ರೀ ವೀರಭದ್ರಪ್ಪ ಈರಪ್ಪ.—ಆ ಹಣವನ್ನು ವಸೂಲು ಮಾಡುವುದಕ್ಕೆ ಗ್ರಾಮಸ್ಥರಿಗೆ ಅಧಿಕಾರ ಕೊಟ್ಟಿರುವುದರಿಂದ ಅವರು ಹಣವನ್ನು ಪಡೆದಿರುವ ಬಗ್ಗೆ ಫೈನಲ್ ರಸೀದಿಗಳನ್ನಾಗಲೀ ಅಥವಾ ಟೆಂಟೇಟಿವ್ ರಸೀದಿಗಳನ್ನಾಗಲೀ ಕೊಡಬೇಕೆಂದು ಸೂಚನೆಗಳನ್ನು ಸರ್ಕಾರದವರು ಕೊಟ್ಟಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಕೆಲವು ಕಡೆಗಳಲ್ಲಿ ರಕ್ಷಣಾ ನಿಧಿಗಾಗಿ ವಸೂಲುಮಾಡಬೇಕೆಂದು ಸೂಚನೆಗಳು ಹೋಗಿಲ್ಲ. ಆದರೆ ಲೋಕಲ್ಲಾಗಿ ಪ್ರತಿಯೊಂದು ಕಡೆಯೂ ರಾಷ್ಟ್ರೀಯ ರಕ್ಷಣಾ ನಿಧಿಗಾಗಿ ಪಂಚಾಯತಿ ಕಮಿಟಿಗಳು ಹಣವನ್ನು ವಸೂಲು ಮಾಡುತ್ತಿದ್ದರು. ಯಾರ್ಯಾರು ಅದನ್ನು ವಸೂಲುಮಾಡುತ್ತಾರೋ ಅವರು